ಶ್ರೀ ಎಸ್ .ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು 3 ಸಹಕಾರಿ ಸಂಘಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನವರು ನಾವು ಅರ್ಜಿಯನ್ನು ಕೊಟ್ಟಿದ್ದೇವೆ ನಮ್ಮನ್ನು ಮೆಂಬರ್ ಮಾಡಿಕೊಂಡಿಲ್ಲ ಎಂದು ಕೇಳಿದ್ದಾರೆ. ಈಗಾಗಲೇ ನಾವು 18-2-98 ರಂದು ಡೆಪ್ಯುಟಿ ರಿಜಿಸ್ಟ್ರಾರ್ ಅವರು ಆದೇಶ ಮಾಡಿದ್ದಾರೆ ಅವರನ್ನು ಮೆಂಬರ್ ಮಾಡಿಕೊಳ್ಳಿ ಎಂದು ಅವರು ತಮ್ಮ ಕಮಿಟಿಯಲ್ಲಿಟ್ಟು ಮೆಂಬರ್ಸ್ ಮಾಡಿಕೊಳ್ಳುವ ದಿಸೆಯಿಂದ ಎಕ್ಸಿಕ್ಯೂಟೀವ್ ಕಮಿಟಿಯಲ್ಲಿಟ್ಟರು ಆಮೇಲೆ ಬೋರ್ಡ್‌ನಲ್ಲಿ ಇಟ್ಟು ಮಾಡಿ ಕೊಡುತ್ತೇವೆಂದು ತಿಳಿಸಿದ್ದಾರೆ. ನೀವು 17-9-97ರಂದು ಅರ್ಜಿ ಕೊಟ್ಟಿದ್ದೀರಿ. ಬಹುಶ: 3 ತಿಂಗಳೊಳಗೆ ಉತ್ತರ ಕೊಡದಿದ್ದರೆ 105ರ ಪ್ರಕಾರ ಮೇಲ್ಮನವಿ ಸಲ್ಲಿಸುವುದಕ್ಕೆ ಅಧಿಕಾರ ಇದೆ. ತಾವು ಮೇಲ್ಮನವಿಯನ್ನು ಸಲ್ಲಿಸಬಹುದು, ನಾವು ಕೂಡ ಸರ್ಕಾರದ ಪರವಾಗಿ ಒತ್ತಡ ತರುತ್ತೇವೆ ಮಾಡಿಕೊಳ್ಳುವುದಕ್ಕೆ ಹೇಳುತ್ತೇವೆ. ಒಂದು ವೇಳೆ ಅವರು ಮಾಡಿಕೊಳ್ಳದಿದ್ದರೆ ತಮಗೆ ಕಾಯ್ದೆಯಲ್ಲಿ ಅವಕಾಶ ಇದೆ. ನಾವು ಕೂಡ ಅಲ್ಲಿ ಮೆಂಬರ್ಸ್ ಮಾಡಿಸುವ ಪ್ರಯತ್ನ ಮಾಡುತ್ತೇವೆ.

(5) ಗಮನ ಸೆಳೆಯುವ ಸೂಚನೆಗಳು

(ಅ) ಶಿಗ್ಗಾಂವ್ ತಾಲ್ಲೂಕ್ ಸವಣೂರು ಬಂಕಾಪುರ ಪಟ್ಟಣಗಳಿಗೆ ವರಹಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) :- ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ ತಾಲ್ಲೂಕು, ಸವಣೂರು ಹಾಗೂ ಬಂಕಾಪುರ ಪಟ್ಟಣಗಳಿಗೆ ವರಹಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ ವಿಳಂಬವಾಗಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

★ಶ್ರೀ ಬಿ. ಎನ್. ಬಚ್ಚೇಗೌಡ (ಮಾನ್ಯ ನಗರಾಭಿವೃದ್ಧಿ ಸಚಿವರು) :- ಶಿಗ್ಗಾಂವ, ಸವಣೂರು ಮತ್ತು ಬಂಕಾಪುರ ಸಂಯುಕ್ತ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ. 745.00 ಲಕ್ಷಗಳಿಗೆ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ. ಪನ ಇ:61:ಯುಡಬ್ಲು ಎನ್ :91, ದಿನಾಂಕ 9. 10.91 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಸಂಯುಕ್ತ ಯೋಜನೆಯಡಿ 2021 ರಲ್ಲಿ ಊಹಿಸಲಾದ ಒಟ್ಟು ಜನಸಂಖ್ಯೆ 1,30,000 ಪ್ರತಿ ದಿನ ತಲಾ 100 ಲೀಟರ್ ನೀರನ್ನು ಒದಗಿಸಲು ಯೋಜಿಸಲಾಗಿತ್ತು. ಮೇಲ್ಕಂಡ ಯೋಜನೆಯಡಿಯಲ್ಲಿ ನಾಗನೂರು ಜಲಾಶಯ ಕೆಲಸವನ್ನು ಕೈಗೆತ್ತಿಕೊಂಡು, ಪೂರ್ಣಗೊಳಿಸಿ ಈವರೆಗೆ ರೂ. 690. 14 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಹಾಗೂ ನಾಗನೂರು ಕೆರೆಯಲ್ಲಿ ನೀರಿನ ಶೇಖರಣಾಗಾರವನ್ನು ಕಟ್ಟಲು ಪ್ರಸ್ತಾಪಿಸಿದ್ದ ಸ್ಥಳವನ್ನು ಮಾರ್ಪಡಿಸಿದ್ದೆ ಸಲುವಾಗಿ ಪರಿಷ್ಕೃತ ಅಂದಾಜನ್ನು ತಯಾರಿಸಬೇಕಾಯಿತು. ಈ ಪರಿಷ್ಕೃತ ಅಂದಾಜನ್ನು ರೂ. 1793.00 ಲಕ್ಷವನ್ನು ತಯಾರಿಸಲಾಗಿ, ಇದರಲ್ಲಿ ಬಂಕಾಪುರ ಪಟ್ಟಣದ ಪಾಲಿನ ರೂ. 474.64 ಲಕ್ಷವನ್ನು ತುಂಬಲು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಒಪ್ಪಿಗೆ ನೀಡಲು ತಿಳಿಸಲಾಯಿತು. ಆದರೆ, ಸರ್ಕಾರದ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಬಂಕಾಪುರ ಪಟ್ಟಣವನ್ನು ಈ ಯೋಜನೆಯಲ್ಲಿ ಸೇರಿಸುವ ಅಗತ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಮಧ್ಯೆ ಮಧ್ಯಂತರ ಹಳ್ಳಿಗಳನ್ನು ಸಹ ಸೇರಿಸಿಕೊಂಡು, ಶಿಗ್ಗಾಂವ ಮತ್ತು ಸವಣೂರು ಪಟ್ಟಣಕ್ಕೆ ಪರಿಷ್ಕೃತ ಅಂದಾಜನ್ನು ರೂ. 2020 ಲಕ್ಷಗಳಿಗೆ ತಯಾರಿಸಲಾಯಿತು.

ಆದರೆ ಮಂಡಲಿಯು, ಯೋಜನೆಯು ಆರ್ಥಿಕ ದೃಷ್ಟಿಯಿಂದ ಈ ಕಾರ್ಯ ಸಾಧ್ಯ (viable) ಆಗುವುದಿಲ್ಲವೆಂದು ತೀರ್ಮಾನಿಸಿ, ಈಗಾಗಲೇ ನಿರ್ಮಿಸಿರುವ ನಾಗನೂರು ಕೆರೆಯನ್ನು ಉಪಯೋಗಿಸಿಕೊಂಡು ಶಿಗ್ಗಾಂವ ಪಟ್ಟಣಕ್ಕೆ ನೀರನ್ನು ಒದಗಿಸಲು ಜಾಕ್‌ವೆಲ್, ಜಲಶುದ್ಧಿಕರಣಾಗಾರ ಹಾಗೂ ಪಂಪುಸೆಟ್ಟುಗಳನ್ನು ಈಗಾಗಲೇ ಅನುಮೋದನೆ ಆಗಿರುವ ಮೂಲ ಅಂದಾಜಿನ ಮೊತ್ತ ರೂ. 745.00 ಲಕ್ಷಗಳಿಗೆ ಸೀಮಿತಗೊಳಿಸಲು, ತೀರ್ಮಾನಿಸಿದೆ. ಇದರಂತೆ ಉಳಿದ ಕಾಮಗಾರಿಗಳಾದ ಜಾಕ್‌ವೆಲ್, ಏರುಕೊಳವೆ ಮಾರ್ಗ, ಶುದ್ಧಿಕರಣ ಘಟಕ ವಿತರಣಾ ಕೊಳವೆಗಳನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

★ಶ್ರೀ ಮಂಜುನಾಥ್ ಸಿ. ಕುನ್ನೂರ್ :- ಮಾನ್ಯ ಉಪಾಧ್ಯಕ್ಷರೆ ನನಗೆ ಈ ಉತ್ತರದಿಂದ ಬಹಳ ಬೇಜಾರಾಗಿದೆ. ಬಹುಶ: ಸ್ವಾತಂತ್ರ ಸಿಕ್ಕಾಗನಿಂದ ಇಲ್ಲಿಯತನಕ ಈ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಇಲಾಖೆಯವರು ಯಾವ ಯಾವ ಯೋಜನೆಗಳನ್ನು ಎಷ್ಟೆಷ್ಟು ಮುಗಿಸಿದ್ದಾರೆ ಎಂದು ವರದಿಯನ್ನು ಈ ಸದನದ ಮುಂದೆ ಇಟ್ಟಿದ್ದರೆ ಈ ಸದನದ ಸದಸ್ಯರಿಗೂ ಹಾಗೂ ಈ ರಾಜ್ಯದ ಜನತೆಗೆ ಸಂತೋಷ ಆಗುತ್ತಿತ್ತು. ಇದಲ್ಲದೆ ಮೊನ್ನೆ ಇವರು ಆಯವ್ಯಯವನ್ನು ಮಂಡಿಸಿದಾಗ ಅದರೊಳಗೆ ನೂತನವಾಗಿ ಮತ್ತೆ ನಾವು 120 ಕೋಟಿ ರೂಪಾಯಿಯ 15 ಯೋಜನೆಗಳನ್ನು ಚಾಲನೆಗೊಳಿಸಿದ್ದೇವೆ ಎಂದು ಹೇಳಿದ್ದಾರೆ. ಹಾಗೆಯೇ ಶಿಗ್ಗಾಂವ್ ಮತ್ತು ಸವಣೂರು ಕುಡಿಯುವ ನೀರಿನ ಯೋಜನೆಗಾಗಿ 1991ನೇ ಇಸವಿಯಲ್ಲಿ ಆಡಳಿತಾತ್ಮಕ ಮಂಜುರಾತಿ ದೊರೆತಿದೆ ಮತ್ತು ಆರು ಕೋಟಿ ತೊಂಭತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ತಮ್ಮ ಹೇಳಿಕೆಯ ಪ್ರಕಾರ ಬಂಕಾಪುರ ಪಟ್ಟಣವನ್ನು ತಾವು ಬಿಡುವುದಾದರೂ ಸಹಿತ, ಅದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವರು ಅದಕ್ಕೆ ಹಣವನ್ನು ಕೊಡಲು ಆಗುವುದಿಲ್ಲ ಎಂದು ಹೇಳಿದರೂ ಕೂಡ ಸವಣೂರು ಪಟ್ಟಣಕ್ಕೆ ತಾವು ನೀರನ್ನು ಕೊಡಿಸಬೇಕಾಗಿದೆ. ಇವೊತ್ತು ಶಿಗ್ಗಾಂವ್ ಜನಸಂಖ್ಯೆ ಇಪ್ಪತ್ತು ಸಾವಿರ ಇದ್ದರೆ ಸವಣೂರು ಪಟ್ಟಣದ ಜನಸಂಖ್ಯೆ ಮೂವತ್ತೈದು ಸಾವಿರ ಇದೆ. ಬೇಕಾದರೆ ತಾವು ಸವಣೂರಿನ ವರದಿಯನ್ನು ತರಿಸಿಕೊಂಡು ನೋಡಿ. ನೆನ್ನೆ ದಿವಸ ಅಲ್ಲಿರತಕ್ಕಂಥ ನಾಗರೀಕ ವೇದಿಕೆಯವರು ನನ್ನನ್ನು ಭೇಟಿಯಾಗಿದ್ದರು. ಅವರೊಂದಿಗೆ ಊರಿನ ಜನ ಕೂಡ ನನ್ನನ್ನು ನೆನ್ನೆ ಭೇಟಿಯಾಗಿದ್ದರು. ನಾನು ಕೂಡ ನೆನ್ನೆ ದಿವಸ ವಿಧಾನ ಸಭೆಯ ಅಧಿವೇಶನಕ್ಕೆ ಬರುವ ಬದಲಾಗಿ ಸವಣೂರಿನ ನೀರಿನ ಕೊರತೆಯನ್ನು ಬಗೆಹರಿಸುವ ಸಲುವಾಗಿ ಅಲ್ಲಿನ ಅಸಿಸ್ಟೆಂಟ್ ಕಮೀಷನರ್‌ರವರಿಗೆ ಭೇಟಿಯಾಗಿದ್ದೇನೆ. ಇವೊತ್ತಿನ ದಿವಸ ಅಲ್ಲಿ ಹದಿನೈದು ದಿವಸಕ್ಕೊಮ್ಮೆ ನೀರನ್ನು ಬಿಡುತ್ತಿದ್ದಾರೆ. ಆ ಊರಿನಲ್ಲಿ ಅನೇಕ ವರ್ಷದಿಂದ ಸವಳು ನೀರನ್ನು ಕುಡಿಯುತ್ತಿದ್ದಾರೆ ಇಂತಹ ಪರಿಸ್ಥಿತಿ ಇರುವಾಗ ನೀರು ಆ ಊರಿಗೆ ನೀರನ್ನು ಕೊಡಬೇಕಾಗಿತ್ತು. ಆದರೆ ತಾವು ಅದನ್ನು ಕೊಡುವುದನ್ನು ಬಿಟ್ಟು ಶಿಗ್ಗಾಂವ್‌ಗೆ ಮಾತ್ರ ಏಳು ಕೋಟಿ ನಲವತ್ತೈದು ಲಕ್ಷಕ್ಕೆ ಸೀಮಿತಗೊಳಿಸಿ ತಾವು ಏನು ನೀರನ್ನು ಕೊಡುತ್ತೇವೆಂದು ಹೇಳಿದ್ದೀರೆ ಅದು ಸರ್ಕಾರದ ನ್ಯಾಯಯುತವಾದ ನಿರ್ಣಯ ಆಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಬಚ್ಚೇಗೌಡರು ಈ ಇಲಾಖೆಯನ್ನು ಹೊಂದಿರತಕ್ಕಂಥವರು, ಅವರು ಬಂದ ಮೇಲೆ ಈ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆ ಆಗುತ್ತದೆ ಎನ್ನತಕ್ಕಂಥ ಭಾವನೆಯನ್ನು ಇವೊತ್ತು ಅನೇಕ ಮಾನ್ಯ ಸದಸ್ಯರು ಹೊಂದಿದ್ದಾರೆ. ಇಂತಹ ಒಂದು ಸಂದರ್ಭ ಇದೆ ಹಾಗೂ ಈ ಬಗ್ಗೆ ನಾನು ಈಗಾಗಲೇ ಅನೇಕ ಬಾರಿ ಪ್ರಶ್ನೆಗಳನ್ನು ಕೇಳಿದ್ದೇನೆ. ದಿನಾಂಕ 8. 1. 93 ರಂದು ಚುಕ್ಕೆ ಗುರುತಿನ ಪ್ರಶ್ನೆ

ಸಂಖ್ಯೆ 731, ದಿನಾಂಕ 18.7.96 ರಂದು 26ನೇ ಪ್ರಶ್ನೆ, ದಿನಾಂಕ 19.1.96 ರಂದು 142ನೇ ಪ್ರಶ್ನೆ ಹಾಗೂ 341 ನೇ ಪ್ರಶ್ನೆ 31.3.95ರಂದು ನಾನು ಪ್ರಶ್ನೆಗಳನ್ನು ಕೇಳಿದ್ದೇನೆ. ತಾವು ಕೊಟ್ಟಂಥ ಉತ್ತರಗಳನ್ನು ನೋಡಿ ತಾವು ಒಮ್ಮೆ ಬಂಕಾಪುರಕ್ಕೆ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ, ಒಮ್ಮೆ ತಾವು ಬಂಕಾಪುರವನ್ನು ಬಿಡುತ್ತೇವೆ ಎಂದುಹೇಳಿದ್ದೀರಿ, ಒಮ್ಮೆ ಮೂರು ಸಾರಿ ಈ ಯೋಜನೆಗಳನ್ನು ಮಾರ್ಪಾಡು ಮಾಡಿದ್ದೇವೆ ಎಂದು ಹೇಳಿದ್ದೀರಿ. ಅಂದರೆ ಸರ್ಕಾರಕ್ಕೆ ತಮಗೆ ತಿಳಿದ ಹಾಗೆ ನಿರ್ಣಯವನ್ನು ತೆಗೆದುಕೊಳ್ಳುವುದು ಅಸಿಂಧುವಲ್ಲವೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಆದಕಾರಣ ದಯಮಾಡಿ ತಾವು ಶಿಗ್ಗಾಂವ್ ಕುಡಿಯುವ ನೀರಿನಜೊತೆಗೆ ಸವಣೂರು ಪಟ್ಟಣದ ಕುಡಿಯುವ ನೀರಿನ ಯೋಜನೆಯ ಕೆಲಸವನ್ನು ತೆಗೆದುಕೊಳ್ಳಬೇಕು. ಅದಕ್ಕೆ ಸಂಬಂಧಪಟ್ಟ ಹಾಗೆ ಪರಿಷ್ಕೃತ ಅಂದಾಜು ಪೆಟ್ಟಿಯನ್ನು ತಯಾರು ಮಾಡಿ ಅದಕ್ಕೆ ಸರ್ಕಾರದ ಅನುಮೋದನೆಯನ್ನು ತೆಗೆದುಕೊಂಡು ಕೂಡಲೇ ಆ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವುನಾಗನೂರ ಕೆರೆ ಆಳ ಮಾಡುವುದಕ್ಕೆ ಕೇವಲ ಆರು ಕೋಟಿ ತೊಂಭತ್ತೆರಡು ಲಕ್ಷ ರೂಪಾಯಿ ಖರ್ಚು ಮಾಡಿ ಈ ಯೋಜನೆಯ ಕಣ್ಣಾಗ ಮಣ್ಣು ಎರಚುತ್ತೀರಿ ಎಂದರೆ ಇದು ಜನತೆಗೆ ನಂಬಲಿಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಈ ಯೋಜನೆಯನ್ನು ಮುಗಿಸಿಕೊಡುತ್ತೇವೆ ಎನ್ನುವಂಥ ಒಂದು ಭರವಸೆಯನ್ನು ಈ ಸದನದೊಳಗೆ ತಾವು ಕೊಡಬೇಕೆಂದು ಸರ್ಕಾರವನ್ನು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡರು :- ಮಾನ್ಯ ಉಪಾಧ್ಯಕ್ಷರೆ, 1991ನೇ ಸಾಲಿನಲ್ಲಿ ಈ ಹಿಂದೆ ಮಾನ್ಯ ಸದಸ್ಯರು ಶಾಸಕರಾಗಿದ್ದಾಗಲೇ ಈ ಯೋಜನೆ ಆಗಿರತಕ್ಕಂಥದ್ದು. ಅವೊತ್ತು ಅದು ಶಿಗ್ಗಾಂವ್, ಸವಣೂರು ಹಾಗೂ ಬಂಕಾಪುರ ಪಟ್ಟಣಗಳನ್ನು ಸೇರಿಕೊಂಡು ಯೋಜನೆಯಾಗಿತ್ತು. ಇನ್ನು ಶಿಗ್ಗಾಂವ್ ಪಟ್ಟಣದ ಜನಸಂಖ್ಯೆ ಇಪ್ಪತ್ತು ಸಾವಿರಕ್ಕಿಂತ ಹೆಚ್ಚಾಗಿದೆ ಎನ್ನತಕ್ಕಂಥದ್ದನ್ನು ಅವರೇ ಹೇಳಿದ್ದಾರೆ. ಹಾಗೆ ಸವಣೂರಿನ ಪ್ರಜಾಸಂಖ್ಯೆ ಅದಕ್ಕಿಂತ ಜಾಸ್ತಿ ಇರತಕ್ಕಂಥದ್ದು. ಸವಣೂರು ಹಾಗೂ ಶಿಗ್ಗಾಂವ್‌ಗೆ ಸುಮಾರು ಹನ್ನೆರಡು ಕಿ.ಮೀ. ಅಂತರ ಇದೆ. ಹಾಗೆಯೇ ವರದಾ ನದಿಯಿಂದ ಬರತಕ್ಕಂಥ ನೀರನ್ನು ತುಂಬಿಕೊಳ್ಳುವುದಕ್ಕೆ ಒಂದು ದೊಡ್ಡ ಕೆರೆ ಅಂದರೆ ಈ ಮೂರು ಪಟ್ಟಣಗಳಿಗೆ ಆಗುವಷ್ಟು ನೀರನ್ನು ಸಂಗ್ರಹಿಸುವ ನಾಗನೂರ್ ಕೆರೆಯನ್ನು ಅವರು ಬಹಳ ಶ್ರಮಪಟ್ಟು ಮಾಡಿಕೊಂಡಿದ್ದಾರೆ. ಅದನ್ನು ಕರ್ನಾಟಕ ಕನಸ್ಟ್ರಕ್ಷನ ಕಾರ್ಪೊರೇಶನ್‌ನವರು ಮಾಡಿದ್ದಾರೆ. ಅದಕ್ಕೆ ಮಾನ್ಯ ಶಾಸಕರಾದ ಕುನ್ನೂರ್‌ರವರು ಬಹಳ ಶ್ರಮಪಟ್ಟಿದ್ದಾರೆ. ಈಗ ಸವಣೂರಿನ ಪ್ರಜಾಸಂಖ್ಯೆ 40 ಸಾವಿರಕ್ಕೂ ಹೆಚ್ಚಾಗಿದೆ ಅಲ್ಲಿ ನೀರನ್ನು ಕೊಡುವುದು ಅವಶ್ಯಕವಿದೆ. ಅದರ ರಿವೈಸ್ ಎಸ್ಟಿಮೇಟ್ ಪ್ರಕಾರ ಏರ್‌ಕೊಳವೆ, ಟ್ರೀಟ್‌ಮೆಂಟ್ ಪ್ಲ್ಯಾಂಟ್, ಜಾಕ್‌ವೆಲ್ ಇವೆಲ್ಲ ಸೇರಿ ಒಟ್ಟು ಏಳುವರೆ ಕೋಟಿ ರೂಪಾಯಿ ಆಗಿದೆ. ಇನ್ನು ಮಾನ್ಯ ಶಾಸಕರು ನನ್ನ ಕಾಲದಲ್ಲಿ ಯಾವ ಯಾವ ಕೆಲಸ ಆಗಿದೆ ಎನ್ನತಕ್ಕಂಥ ಮಾತನ್ನು ಕೇಳಿದರು. ನಾನು ಕೆಲವೊಂದು ಅಂಶಗಳನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ಬಿಟ್ಟರೆ ಇನ್ನೊಂದು ದೊಡ್ಡ ಯೋಜನೆ ಎಂದರೆ ಅದು ಬಿಜಾಪುರದ ಕುಡಿಯುವ ನೀರಿ ಯೋಜನೆ. ಆಲಮಟ್ಟಿಯ ಕೃಷ್ಣಾ ನದಿಯಿಂದ ಸುಮಾರು 52 ಕಿ.ಮೀ ದೂರದಿಂದ ನೀರನ್ನು ತಂದು ಪ್ರತಿದಿನ ಬಿಜಾಪುರಕ್ಕೆ ನೀರನ್ನು ಕೊಡುತ್ತಿದ್ದೇವೆ. ತುಮಕೂರಿಗೆ ನೀರನ್ನು ಕೊಟ್ಟಂಥದ್ದು ಇದೆ, ಹೇಮಾವತಿ ನದಿಯಿಂದ ನೀರನ್ನು ಬುಗುಡ್ನಳ್ಳಿ ಕೆರೆಗೆ ಕೊಟ್ಟಂಥದ್ದು ಇದೆ. ಅದು ಸುಮಾರು ಹದಿನಾಲ್ಕು ಕೋಟಿ ರೂಪಾಯಿ ಯೋಜನೆ ಇದೆ. ಅರಸೀಕೆರೆಗೆ, ತಿಪಟೂರಿಗೆ, ಜೀವರ್ಗಿಗೆ ನೀರನ್ನು ಕೊಟ್ಟಂಥ ಉದಾಹರಣೆಗಳು ಇವೆ. ಹಾಗೆಯೇ ಸಿಂಧನೂರಿಗೆ, ಬಂಟ್ವಾಳ್‌ಗೆ, ಮಾನವಿಗೆ, ಗಂಗಾವತಿಗೆ ನೀರನ್ನು

ಕೊಟ್ಟಂಥದ್ದು ಇದೆ. ಹೀಗೆ ಒಟ್ಟು 26 ಯೋಜನೆಗಳಿಗೆ ಒಟ್ಟು 161 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಈ ಯೋಜನೆಗಳನ್ನು ಮುಗಿಸಿದ್ದೇವೆ, ಎಷ್ಟು ಹಣವನ್ನು ತೊಡಗಿಸಿದ್ದೇವೆ ಎಂದು ಕೂಡ ತಿಳಿಸುತ್ತೇನೆ. ನೀರಾವರಿಗೆ ಬರತಕ್ಕಂಥ ಬಡ್ಜೆಟ್‌ನಲ್ಲಿ ಸುಮಾರು ಮೂವತ್ತು ಭಾಗದ ಹಣ ಮಾನ್ಯ ನಾಗೇಗೌಡರಿಗೆ ಹೋಗುತ್ತದೆ. ನಮಗೆ ಪ್ರತಿ ವರ್ಷಕ್ಕೆ ಬರತಕ್ಕಂಥ ಹಣ ಕೇವಲ 71 ಕೋಟಿ ರೂಪಾಯಿ ಮಾತ್ರ. ಅದರಲ್ಲೇ ನಾವು ಎಲ್ಲರಿಗೂ ನೀರನ್ನು ಕೊಡಬೇಕು. ಪಟ್ಟಣಗಳಲ್ಲಿ ಸುಮಾರು ಒಂದು ಕೋಟಿ ಹತ್ತು ಲಕ್ಷ ಜನರಿದ್ದಾರೆ, ನೀರಿನ ಅವಶ್ಯಕತೆ ತುಂಬಾ ಇದೆ. ಇವೊತ್ತು ಒಂದೊಂದು ಯೋಜನೆಗೆ ಸುಮಾರು ಮೂವತ್ತರಿಂದ ಮೂವತ್ತಾರು ಕೋಟಿ ರೂಪಾಯಿ ಖರ್ಚಾಗುತ್ತದೆ. ಬಿಜಾಪುರದ ಕುಡಿಯುವ ನೀರಿನ ಯೋಜನೆಗೂ ಕೂಡ 36 ಕೋಟಿ ರೂಪಾಯಿ ಖರ್ಚಾಗಿದೆ. ಮೈಸೂರಿನಲ್ಲಿ ಎರಡನೇ ಹಂತ, ಮೂರನೇ ಹಂತ ಹಾಗೂ ನಾಲ್ಕನೇ ಹಂತವನ್ನು ತೆಗೆದುಕೊಂಡಿದ್ದೇವೆ. ಮಂಗಳೂರಿನಲ್ಲಿ ಎರಡನೇ ಹಂತ, ಮೂರನೇ ಹಂತವನ್ನು ತೆಗೆದುಕೊಂಡಿದ್ದೇವೆ. ಅವುಗಳಿಗೆಲ್ಲ ಹಣವನ್ನು ಒದಗಿಸಬೇಕು. ಹಣವನ್ನು ಬೇರೆ ಬೇರೆ ಹಣಕಾಸಿನ ಸಮಸ್ಯೆಯ ಜೊತೆಗೆ ನಾವು ಟೈ-ಅಪ್ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಹುಡ್ಕೊ, ವರ್ಲ್ಡ್ ಬ್ಯಾಂಕ್, ಎಲ್. ಐ. ಸಿ. ಎಲ್ಲೆಲ್ಲಿಂದ ಹಣ ಬರುತ್ತದೆ ಅದನ್ನೆಲ್ಲವನ್ನೂ ಜೋಡಣೆ ಮಾಡಿಕೊಂಡು ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಸವಣೂರಿನ ಬಗ್ಗೆ ಅವರ ಏನು ಆಸೆ ಇದೆ, ಅದಕ್ಕೆ ಇನ್ನು 12-13 ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ ಅದನ್ನು ಸೇರಿಸಿ ಆ ಯೋಜನೆಯನ್ನು ಮಾಡಿ ಕೊಡುತ್ತೇವೆ. ಆದರೆ ಬಂಕಾಪುರ ಮಾತ್ರ ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಂಜುನಾಥ್. ಸಿ. ಕುನ್ನೂರ್ :- ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು 1991 ರಲ್ಲಿ ಪ್ರಾರಂಭವಾಗಿದೆ ನಾವು ಈಗ 1998ರಲ್ಲಿ ಇದ್ದೇವೆ. ಏಳು ವರ್ಷವಾಯಿತು. ನಾಗನೂರು ಕೆರೆಯ ಆಳದಿಂದ ಸಾಕಷ್ಟು ನೀರು ಸಂಗ್ರಹವಾಗಿದೆ. ವರಹಾ ನದಿಯಿಂದ ನೀವು ನೀರನ್ನು ತರುವುದಕ್ಕೆ ಲೀಟ್ ಆದರೂ ಪರವಾಗಿಲ್ಲ ಇವೊತ್ತು ಆ ಶಿಗ್ಗಾಂವ್ ನಾಗನೂರ್ ಕೆರೆಯಿಂದ ತಾವು ಸವಣೂರಿಗೆ 12 ಕಿ.ಮೀ. ಪೈಪ್‌ಲೈನ್‌ನ್ನು ಮತ್ತು ಅಲ್ಲಿ ಒಂದು ಪ್ಯೂರಿಫಿಕೇಶನ್ ಪ್ಲ್ಯಾಂಟ್‌ನ್ನು ಮಾಡಿ. ಅದಕ್ಕೆ ತಾವು ಎರಡು ಮೂರು ಸಾರಿ ಟೆಂಡರನ್ನು ಕರೆದಿದ್ದೀರಿ. ಆದರೆ ಒಂದು ಸಾರಿ ಕೂಡ ಅದನ್ನು ಆಕ್ಸೆಪ್ಟ ಮಾಡಿಕೊಂಡಿಲ್ಲ. ತಾವು ಯಾರಿಗಾದರೂ ಕೊಡಿ. ಆದರೆ ಅಲ್ಲಿ ಪ್ಯೂರಿಫಿಕೇಶನ್ ಪ್ಲ್ಯಾಂಟನ್ನು ಮಾಡಿಸಿ, ಪೈಪ್‌ಲೈನ್ ಹಾಕಿಸಿ ಆ ಕೆಲಸವನ್ನು ಈ ವರ್ಷ ಮಾಡಿಕೊಡಬೇಕೆಂದು ಇನ್ನೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡರು :- ಕೋರ್ಟಿನ ತೀರ್ಮಾನವನ್ನು ಮುಗಿಸಿಕೊಂಡು ಆ ಕೆಲಸವನ್ನು ಮುಗಿಸುತ್ತೇವೆ.

(ಆ) ರಾಜ್ಯದಲ್ಲಿರುವ ಏಕ ಉಪಾಧ್ಯಾಯ ಶಾಲೆಗಳಿಂದ ತುಮಕೂರು ಜಿಲ್ಲೆಯಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತೊಂದರೆ

ಶ್ರೀ ಬಿ. ನಂಜಾಮರಿ (ತಿಪಟೂರು) :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳು ಎಷ್ಟು ಇವೆ? ಹಾಗೂ ತಮ್ಮ ತುಮಕೂರು ಜಿಲ್ಲೆಯಲ್ಲಿ ಹಾಗೂ ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಇವೆ ಎಂದು ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.